# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 232 |
| ಉತ್ತರಿಸಬೇಕಾದ ದಿನಾಂಕ | : 18.08.2026 |
| ಉತ್ತರಿಸಬೇಕಾದ ಸಚಿವರು | : ವಸತಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ವಸತಿ ರಹಿತರಿಗೆ ಆಸರೆಯಾಗಬೇಕಿದ್ದ ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಗಳು ಹಳ್ಳ ಹಿಡಿದಿದ್ದು, ಕಳೆದ 18 ತಿಂಗಳುಗಳಿಂದ ಬಿಡುಗಡೆಯಾಗಬೇಕಿದ್ದ ರೂ.4,500 ಕೋಟಿಗೂ ಅಧಿಕ ಸಬ್ಸಿಡಿ ಅನುದಾನ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳ ಮನೆಯ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಆಡಿಟ್ ಮೂಲಕ "Ok" ಯಾದ ಫಲಾನುಭವಿಗಳ ಆಧಾರ್ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಅದರಂತೆ ಕಳೆದ 18 ತಿಂಗಳುಗಳಿಂದ ವಿವಿಧ ವಸತಿ ಯೋಜನೆಗಳಡಿ ಮನೆಗಳ ಭೌತಿಕ ಪ್ರಗತಿಗನುಗುಣವಾಗಿ ಅರ್ಹ ಫಲಾನುಭವಿಗಳಿಗೆ ರೂ.3072.29ಕೋಟಿಗಳ ಸರ್ಕಾರದ ಸಬ್ಸಿಡಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಯೋಜನಾವಾರು ವಿವರಗಳು ಈ ಕೆಳಕಂಡಂತಿದೆ:<br>ರೂ. ಕೋಟಿಗಳಲ್ಲಿ
<table>
<tr><th>ಕ್ರ ಸಂ</th><th>ಯೋಜನೆ</th><th>ಬಿಡುಗಡೆ ಮಾಡಲಾದ ಅನುದಾನ</th></tr>
<tr><td>1</td><td>ಬಸವ ವಸತಿ ಯೋಜನೆ</td><td>824.96</td></tr>
<tr><td>2</td><td>ಡಾ. ಬಿ ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ)</td><td>711.75</td></tr>
<tr><td>3</td><td>ಡಿ ದೇವರಾಜ ಅರಸು ವಸತಿ ಯೋಜನೆ</td><td>73.24</td></tr>
<tr><td>4</td><td>ವಾಜಪೇಯಿ ನಗರ ವಸತಿ</td><td>86.59</td></tr>
<tr><td>5</td><td>ಡಾ. ಬಿ ಆರ್ ಅಂಬೇಡ್ಕರ್ ನಿವಾಸ್ ಯೋಜನೆ (ನಗರ)</td><td>150.55</td></tr>
<tr><td>6</td><td>ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆ</td><td>372.54</td></tr>
<tr><td>7</td><td>ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆ</td><td>852.52</td></tr>
<tr><td>8</td><td>PM -JANMAN</td><td>0.14</td></tr>
<tr><td colspan="2">ಒಟ್ಟು</td><td>3072.29</td></tr>
</table>
</td></tr>
<tr><td>(ಆ)</td><td>ಬಡ ಮತ್ತು ಮಧ್ಯಮ ವರ್ಗದ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಂಡಿದ್ದರೂ, ಸರ್ಕಾರದ ಹಂತದಲ್ಲಿ ಸಬ್ಸಿಡಿ ಹಣ ಬಿಡುಗಡೆಯಾಗದ ಕಾರಣ ಸಾಲದ ಸುಳಿಗೆ ಸಿಲುಕಿ ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿರುವುದು ನಿಜವೇ</td><td>ಅರ್ಹ ಫಲಾನುಭವಿಗಳು ಮನೆ ನಿರ್ಮಾಣ ಮಾಡಿಕೊಂಡು, ಆಡಿಟ್ ಮೂಲಕ "Ok" ಯಾದ ಫಲಾನುಭವಿಗಳಿಗೆ ಅವರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಲಭ್ಯತೆಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗಿದೆ. ಆದರೆ ಕೇಂದ್ರ ಸರ್ಕಾರದ ಪಿ.ಎಂ.ಎ.ವೈ-ಗ್ರಾಮೀಣ ಯೋಜನೆಯಡಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು SNA SPARSH ಜಾರಿಗೆ ಬಂದಿದ್ದು, ಈ ಪ್ರಕ್ರಿಯೆಯಡಿ ಕೇಂದ್ರ ಸರ್ಕಾರದ Awaasoft ತಂತ್ರಾಂಶ ಮತ್ತು ಖಜಾನೆ-2 ನಡುವೆ Integration ಆಗಬೇಕಿರುತ್ತದೆ. ಸದರಿ ಕಾರ್ಯವು ಯಶಸ್ವಿಯಾಗಿ ದಿ:13.08.2026ಕ್ಕೆ, ಪೂರ್ಣಗೊಂಡಿದ್ದು,ಪ್ರಸ್ತುತ FTO ತಯಾರಿಸಲು ಈಗ ತಂತ್ರಾಂಶ ಸಿದ್ಧವಿದೆ. ಅದರಂತೆ, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವ ಸಂಬಂಧ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಎಲ್ಲಾ ಅಗತ್ಯ ಸೂಚನೆಗಳನ್ನು ನೀಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ನೆರೆ ಸಂತ್ರಸ್ಥರ ಪುನರ್ವಸತಿ ಯೋಜನೆಯಡಿಯಲ್ಲಿ, ಕಳೆದ 18 ತಿಂಗಳುನಲ್ಲಿ ರೂ.170.14 ಕೋಟಿ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ ರೂ.6.37 ಕೋಟಿ ಬಿಡುಗಡೆ ಮಾಡಲು ಅನುದಾನದ ಕೊರತೆ ಉಂಟಾಗಿದೆ. ಈ ಸಂಬಂಧ ಅನುದಾನ ಬಿಡುಗಡೆ ಕೋರಿ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.</td></tr>
<tr><td>(ಇ)</td><td>ವಸತಿ ಇಲಾಖೆಯು ನಿಗಮಕ್ಕೆ ರೂ.4,500 ಕೋಟಿ ವಿಶೇಷ ಅನುದಾನ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ; ಹಾಗಿದ್ದಲ್ಲಿ, ಆರ್ಥಿಕ ಇಲಾಖೆಯಿಂದ ಈ ಅನುದಾನ ಬಿಡುಗಡೆಗೆ ಅನುಮೋದನೆ ದೊರೆತಿದೆಯೇ ಮತ್ತು ಪ್ರಸ್ತುತ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ?</td><td>ರಾಜೀವ್ ಗಾಂಧಿ ವಸತಿ ನಿಗಮದಿಂದ ವಿಶೇಷ ಅನುದಾನವನ್ನು ಕೋರಿ ಯಾವುದೇ ಪ್ರಸ್ತಾವನೆಯು ಆರ್ಥಿಕ ಇಲಾಖೆಗೆ ಸಲ್ಲಿಕೆಯಾಗಿರುವುದಿಲ್ಲ.</td></tr>
</table>

| | | |
|---|---|---|
| (ಈ) | ಲಕ್ಷಾಂತರ ಬಡ ಕುಟುಂಬಗಳ ಹಿತದೃಷ್ಟಿಯಿಂದ ಬಾಕಿ ಇರುವ ಸಂಪೂರ್ಣ ಸಬ್ಸಿಡಿ ಮೊತ್ತವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ಜಮ ಮಾಡಲು ಸರ್ಕಾರ ರೂಪಿಸಿರುವ ತುರ್ತು ಕಾಲಮಿತಿ ಯೋಜನೆ ಯಾವುದು; | ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳ ಮನೆಯ ಜಿ.ಪಿ.ಎಸ್ ಆಧಾರಿತ ಹಂತವಾರು ಭೌತಿಕ ಪ್ರಗತಿಗನುಗುಣವಾಗಿ ಆಡಿಟ್ ಮೂಲಕ OK ಯಾದ ಫಲಾನುಭವಿಗಳ ಆಧಾರ್ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಪಿ.ಎಂ.ಎ.ವೈ-ಗ್ರಾಮೀಣ ಯೋಜನೆಯಡಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು SNA SPARSH ಜಾರಿಗೆ ತಂದಿದ್ದು, ಈ ಪ್ರಕ್ರಿಯೆಯಡಿ ಕೇಂದ್ರ ಸರ್ಕಾರದ Awaasoft ತಂತ್ರಾಂಶ ಮತ್ತು ಖಜಾನೆ-2 ನಡುವೆ integration ಮಾಡಬೇಕಿರುತ್ತದೆ.<br><br>ಪ್ರಸ್ತುತ ಕೇಂದ್ರ ಸರ್ಕಾರದ Awaasoft ತತ್ರಾಂಶ ಮತ್ತು ಖಜಾನೆ-2 ನಡುವೆ integration ಪ್ರಕ್ರಿಯೆಯು ದಿ:13.08.2026 ಮುಕ್ತಾಯವಾಗಿದ್ದು, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ:ವಇ 278 ಹೆಚ್‌ಎಎಂ 2026.

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ ಸಚಿವರು